ನಿಜವೋ ಸ್ವತಃ ದಿವಾಕರ್ ಬಗ್ಗೆಯೂ ಅಷ್ಟೇ ನಿಜ. ಇಂಥ ಓದುಗರಲ್ಲಿ ವಿಲಿಯಂ ಬ್ಲೇಕ್, ಆರ್ಥರ್ ಕಾನನ್ ಡಾಯಲ್, ವರ್ಜೀನಿಯಾ ವುಲ್ಫ್, ನೊಬೊಕೊವ್, ಡಿ.ವಿ.ಜಿ., ಗೋಪಾಲಕೃಷ್ಣ ಅಡಿಗ, ಗೋವಿಂದ ಪೈ ಮುಂತಾದ ಸಿದ್ಧಪ್ರಸಿದ್ಧರು ಇದ್ದಾರೆ ಎಂಬುದನ್ನು ಸಾಕ್ಷ್ಯ ಸಮೇತ ನಮಗೆ ತಿಳಿಸಿಕೊಡುವ ದಿವಾಕರ್ ಸಾಹಿತ್ಯ ಚರಿತ್ರೆಯ, ಸಂಸ್ಕೃತಿ ಚರಿತ್ರೆಯ ಮಾದರಿಯೊಂದನ್ನೇ ಇಲ್ಲಿ ಸೂಚಿಸಿಬಿಟ್ಟಿದ್ದಾರೆ. ಇದು ದಿವಾಕರ್ ಅವರ ಪ್ರಬಂಧಗಳ ಪ್ರಾಮುಖ್ಯ ಮತ್ತು ವೈಶಿಷ್ಟ್ಯ. ಸಾಮಾನ್ಯವಾಗಿ ಇತರರು ತುಳಿಯದ ಹಾದಿಯಲ್ಲಿ ಸಾಗಿ ನಾವು ಅಷ್ಟಾಗಿ ಗಮನಿಸಿರದ ಸಂಗತಿಗಳ ಬಗ್ಗೆ ಗಮನ ಸೆಳೆಯುವುದು ದಿವಾಕರ್ ಬರವಣಿಗೆಯ ಮುಖ್ಯ ಲಕ್ಷಣ.

ಪ್ರಸ್ತುತ ಸಂಕಲನದಲ್ಲಿ ನಾವು ಓದಲೇ ಬೇಕಾದ ಇಂಥ ಹಲವು ಬರಹಗಳಿವೆ. 'ಅರೇಬಿಯನ್ ನೈಟ್ಸ್ ಎಂಬ ಅದ್ಭುತ ಕಥಾಲೋಕ' ಇಂಥ ಒಂದು ಲೇಖನ. ಈ ಕತೆಗಳನ್ನು ಮೊದಲು ಹೇಳಿದ ಹಿಂದಿನ ಸಂದರ್ಭ, ಆಮೇಲೆ ಈ ಕತೆಗಳು ಸಂಗ್ರಹ ರೂಪಕ್ಕೆ ಬಂದ ಹಿನ್ನೆಲೆ, ಬೇರೆಬೇರೆ ಭಾಷೆಗಳಿಗೆ ಅನುವಾದಗೊಂಡಾಗ ಅವು ಹುಟ್ಟಿಸಿದ ಆಸಕ್ತಿ, ಬೇರೆಬೇರೆ ಸಾಹಿತ್ಯ ಪರಂಪರೆಗಳ ಬಗ್ಗೆ ಅವು ಮಾಡಿದ ಪ್ರಭಾವ–ಪರಿಣಾಮಗಳು ಇವುಗಳ ಸುತ್ತ ದಿವಾಕರ್ ತಮ್ಮ ಕಥನವನ್ನು ಹೆಣೆದಿದ್ದಾರೆ. ಅಂಕಿಅಂಶಗಳಿಂದ ಕೂಡಿದ್ದರೂ ಅದನ್ನೊಂದು ಒಣ, ಜಡ ಮಾಹಿತಿಪೂರ್ಣ ಲೇಖನವನ್ನಷ್ಟೇ ಆಗಿಸದೆ ದಿವಾಕರ್ ಅರೇಬಿಯನ್ ನೈಟ್ಸ್ ಕಥೆಗಳ ಬಗ್ಗೆ ನಾವು ಇನ್ನಷ್ಟು ಕುತೂಹಲಗೊಳ್ಳುವಂಥ ಪ್ರಬಂಧವೊಂದನ್ನು ರಚಿಸಿದ್ದಾರೆ. ಅವರು ನೀಡಿರುವ ಮಾಹಿತಿಗಳೂ ಸ್ವಾರಸ್ಯಪೂರ್ಣವಾಗಿವೆ. 'ಥೌಸಂಡ್ ಅಂಡ್ ಒನ್ ನೈಟ್ಸ್' ಎಂಬ ಶೀರ್ಷಿಕೆಯಲ್ಲೂ ಈ ಕಥೆಗಳು ಪ್ರಸಿದ್ಧವಾಗಿವೆಯಷ್ಟೆ. ಅರ್ಜೆಂಟೈನಾ ಲೇಖಕ ಬೋರ್ಹೆಸ್ ಪ್ರಕಾರ ಈ ಕೃತಿಯಲ್ಲಿ ಸಾವಿರದೊಂದು ರಾತ್ರಿಗಳಾಗಲೀ ಕತೆಗಳಾಗಲೀ ಇಲ್ಲವಂತೆ. ಸಾವಿರ ಎಂದರೆ ಅನಂತ ಎಂಬ ಅರ್ಥದಲ್ಲಿ




**ಪುಸ್ತಕ ಓದಿದ್ದಕ್ಕೆ ಪುಸ್ತಕವೇ ಸಾಕ್ಷಿ**
(ಪ್ರಬಂಧಗಳು)
ಲೇ: ಎಸ್. ದಿವಾಕರ್
ಪು: 152 ; ಬೆ: ರೂ. 130
ಪ್ರ: ಅಂಕಿತ ಪುಸ್ತಕ,
ಗಾಂಧಿ ಬಜಾರ್, ಬಸವನಗುಡಿ,
ಬೆಂಗಳೂರು.